ಅನುಬಂಧ

1991–92ರ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿರುವ ಜಿಲ್ಲಾವಾರು ಅಂಧರು, ಕಿವುಡರುಗಳ ಸಂಖ್ಯೆ

ಕ್ರಮ ಸಂಖ್ಯೆ ಜಿಲ್ಲೆಯ ಹೆಸರು	ಅಂಧರು	ಕಿವುಡರು:ಮೂಕರು
1. ಬೆಂಗಳೂರು (ಗ್ರಾಮಾಂತರ)	1,179	1,275
2. ಬೆಂಗಳೂರು (ನಗರ)	2,357	2,131
3. ಬೆಳಗಾಂ	2,153	3,584
4. ಬಳ್ಳಾರಿ	1,470	1,800
5. ಬೀದರ್	1,332	1,139
6. ಬಿಜಾಪುರ	618	2,626
7. ಚಿಕ್ಕಮಗಳೂರು	1,645	1,283
8. ಚಿತ್ರದುರ್ಗ	1,811	2,398
9. ಕಾರವಾರ	2,797	3,706
10. ದಕ್ಷಿಣ ಕನ್ನಡ	1,554	2,607
11. ಗುಲ್ಬರ್ಗಾ	2,283	3,786
12. ಹಾಸನ	1,428	1,979
13. ಕೊಡಗು	467	598
14. ಕೋಲಾರ	2,508	2,722
15. ಮಂಡ್ಯ	1,457	2,295
16. ಮೈಸೂರು	4,711	4,313
17. ರಾಯಚೂರು	3,527	3,750
18. ಶಿವಮೊಗ್ಗ	1,532	1,730
19. ತುಮಕೂರು	2,497	3,696
20. ಉತ್ತರ ಕನ್ನಡ	591	1,259
	39,317	48,757

ವಿಶ್ವ ಕಾರ್ಯಕ್ರಮದ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಿರುವ ಬಗ್ಗೆ

2092: ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್):– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ರಾಜ್ಯ ಸರ್ಕಾರವು ವಿಶ್ವ ಕಾರ್ಯಕ್ರಮದ ಯೋಜನೆಯಡಿ ಗುರುತಿಸಲಾಗುವ ಫಲಾನುಭವಿಗಳೆಷ್ಟು ? ಈ ಬಗ್ಗೆ ಖರ್ಚು ಮಾಡಲಾಗಿರುವ ಹಣವೆಷ್ಟು;

2. ರಾಜ್ಯದಲ್ಲಿ ಪ್ರಾರಂಭಿಸಲಾಗಿರುವ ಇಂಡಸ್ಟ್ರಿಯಲ್ ಕೋ–ಆಪರೇಟಿವ್ ಸೊಸೈಟಿಗಳೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು);

3. ಇಂಡಸ್ಟ್ರಿಯಲ್ ಕೋ–ಆಪರೇಟಿವ್ ಸೊಸೈಟಿ ಪ್ರಾರಂಭ ಮಾಡಲು ಇರುವ ನಿಯಮಾವಳಿಗಳೇನು ? ಹಾಗೂ ಅವುಗಳನ್ನು ಪ್ರಾರಂಭ ಮಾಡಿದ್ದಲ್ಲಿ ಸರ್ಕಾರದಿಂದ ಸಿಗುವ ಸವಲತ್ತುಗಳೇನು ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):–

1. 1,44,000 ಫಲಾನುಭವಿಗಳನ್ನು ಆಳವಡಿಸಲಾಗುವುದು. ಜನವರಿ 1993 ರವರೆಗೆ ವಿಶ್ವ ಕಾರ್ಯಕ್ರಮದಡಿಯಲ್ಲಿ ಒಟ್ಟು 1694.021 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು ಇದರಲ್ಲಿ 1532.89 ಲಕ್ಷ ರೂ.ಗಳನ್ನು ರಾಜ್ಯ ಮಟ್ಟದ ನಿಗಮಗಳು ಮತ್ತು ಮಂಡಲಿಗಳ ಮುಖಾಂತರವೂ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮುಖಾಂತರವೂ ಒಟ್ಟು 161.131 ಲಕ್ಷ ರೂ.ಗಳನ್ನು ದಿನಾಂಕ: 31–1–93ರವರೆಗೆ ಖರ್ಚು ಮಾಡಲಾಗಿರುತ್ತದೆ. (ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮುಖಾಂತರ ಖರ್ಚು ಮಾಡಿರುವ ವಿವರಗಳನ್ನು ಜಿಲ್ಲಾವಾರು ಅನುಬಂಧ – 1ರಲ್ಲಿ ಲಗತ್ತಿಸಲಾಗಿದೆ.

2. 1ನೇ ಅನುಬಂಧದಲ್ಲಿ ಒದಗಿಸಲಾಗಿದೆ.

3. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 6ರ ಪ್ರಕಾರ ಕೈಗಾರಿಕಾ ಸಹಕಾರ ಸಂಘಗಳನ್ನು ನೋಂದಾಯಿಸಲು ಈ ಕೆಳ ಕಾಣಿಸಿದ ನಿಬಂಧನೆಗಳನ್ನು ಅನುಸರಿಸಬೇಕಾಗುತ್ತದೆ.

ಅ) ನಿಗದಿತ ಅರ್ಜಿ ನಮೂನೆಯೊಂದಿಗೆ ಉದ್ದೇಶಿತ ಕೈಗಾರಿಕಾ ಸಹಕಾರ ಸಂಘಗಳ ಉಪನಿಯಮಗಳ ಮೂರು ಪ್ರತಿ ಲಗತ್ತಿಸಬೇಕು.
ಆ) ಸದರೀ ಸಂಘದ ಒಟ್ಟು ಸದಸ್ಯರ ಸಂಖ್ಯೆ 10ಕ್ಕಿಂತ ಕಡಿಮೆ ಇರಬಾರದು.
ಇ) ಈ ಅರ್ಜಿದಾರರ ವಯಸ್ಸು 18 ಕ್ಕಿಂತ ಕಡಿಮೆ ಇರಬಾರದು.
ಈ) ಉದ್ದೇಶಿತ ಸಹಕಾರ ಸಂಘದ ಉದ್ದೇಶವು ಕೈಗಾರಿಕಾ ಚಟುವಟಿಕೆ ಇರಬೇಕು, ಮತ್ತು ಸದರೀ ಸಂಘವು ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುವಂತಿರಬೇಕು ಮತ್ತು ಎಲ್ಲಾ ಸದಸ್ಯರು ಸದರೀ ಸಂಘದ ಕಾರ್ಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು ಹಾಗೂ ಸದರೀ ಸದಸ್ಯರು ಅದೇ ಬಗೆಯ ಉದ್ಯೋಗದಲ್ಲಿ ನಿರತರಾಗಿರಬೇಕು.
ಉ) ಎಲ್ಲಾ ಅರ್ಜಿದಾರರು ಅರ್ಜಿಯಲ್ಲಿ ಸಹಿ ಮಾಡಿರಬೇಕು.

ಈ ಮೇಲಿನ ನಿಬಂಧನೆಗಳಲ್ಲದೆ ಈ ಕಛೇರಿಯಿಂದ ಕೈಗಾರಿಕಾ ಸಹಕಾರ ಸಂಘಗಳನ್ನು ನೋಂದಾಯಿಸಲು ಆಡಳಿತಾತ್ಮಕ ಅನುಮತಿ ಪಡೆದುಕೊಳ್ಳಬೇಕು. ಮತ್ತು ಇದಲ್ಲದೇ ಸಾಧ್ಯತಾ ವರದಿಯನ್ನು ಇಲಾಖೆಯಿಂದ ಪಡೆಯಬೇಕು.

ಊ) ನೋಂದಣಿ ಸಮಯದಲ್ಲಿ ಉದ್ದೇಶಿತ ಕೈಗಾರಿಕಾ ಸಹಕಾರ ಸಂಘದ ಕೈಗಾರಿಕೆಯ ಕಾರ್ಯ ಚಟುವಟಿಕೆ ಬಗ್ಗೆ ಯೋಜನಾ ವರದಿ ಲಗತ್ತಿಸಬೇಕಾಗಿರುತ್ತದೆ.

ಪ್ರಾರಂಭಗೊಂಡ ಕೈಗಾರಿಕಾ ಸಹಕಾರ ಸಂಘಗಳಿಗೆ ಅಗತ್ಯಕ್ಕನುಸಾರವಾಗಿ ಮತ್ತು ಸದರೀ ಯೋಜನೆಯ ನಿಯಮಕ್ಕೆ ಅನುಸಾರವಾಗಿ ಕೆಳಕಂಡ ಸವಲತ್ತುಗಳನ್ನು ನೀಡಲಾಗುವುದು.

1) <u>ರಾಜ್ಯವಲಯದಲ್ಲಿ.</u>

ಅ) ಶೇರು ಬಂಡವಾಳ ಹೂಡಿಕೆ.

ಆ) ಶೇರು ಬಂಡವಾಳ ಸಾಲ.

ಇ) ಮ್ಯಾನೇಜೀರಿಯಲ್ ಗ್ರಾಂಟ್

ಈ) ತೆಂಗಿನ ನಾರಿನ ಕೈಗಾರಿಕಾ ಸಹಕಾರ ಸಂಘಗಳಿಗೆ ಉತ್ಪಾದಿಸಿದ ವಸ್ತುಗಳನ್ನು ಮಾರಾಟ ಮಾಡಲು ಶೇ.20ರ ರಿಬೇಟ್ ನೀಡಲಾಗುವುದು (ಅದರಲ್ಲಿ ರಾಜ್ಯ ಸರ್ಕಾರದ ಪಾಲು ಶೇ.10ಹಾಗೂ ಕೇಂದ್ರ ಸರ್ಕಾರದ ಪಾಲು ಶೇ.10).

2) ಜಿಲ್ಲಾ ವಲಯದಲ್ಲಿ:

ಅ) ಕೈಗಾರಿಕಾ ಸಹಕಾರ ಸಂಘಗಳಿಗೆ ಗ್ರಾಂಟ್ ಶೇರು ಬಂಡವಾಳ ಮತ್ತು ಶೇರು ಬಂಡವಾಳ ಸಾಲ.

ಆ) ಕೈಗಾರಿಕಾ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಲು ಹೊಸ ಸದಸ್ಯರಿಗೆ ಶೇರು ಬಂಡವಾಳ ಸಾಲ.

ಇ) ರಾಜ್ಯ ಸರ್ಕಾರದಿಂದ ನಿಯಮಾನುಸಾರ ಬಂಡವಾಳ ಸಹಾಯಧನ ನೀಡಲಾಗುವುದು. ಶೇ.51ಕ್ಕಿಂತ ಸರ್ಕಾರದ ಬಂಡವಾಳ ಕಡಿಮೆ ಇದ್ದಲ್ಲಿ ಮಾತ್ರ ಅಂತಹ ಕೈಗಾರಿಕಾ ಸಹಕಾರ ಸಂಘಗಳಿಗೆ ಬಂಡವಾಳ ಸಹಾಯಧನ ನೀಡಲಾಗುವುದು.

ಈ) ದುಡಿಮೆ ಬಂಡವಾಳ ಸಾಲ.

ವಿಧಾನಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2092

"ಅನುಬಂಧ – 1"

ರಾಜ್ಯದಲ್ಲಿರುವ ಜಿಲ್ಲಾವಾರು ಕೈಗಾರಿಕಾ ಸಹಕಾರ ಸಂಘಗಳು

ಸಂಖ್ಯೆ	ಜಿಲ್ಲೆಯ ಹೆಸರು	ಕೈಗಾರಿಕಾ ಸಹಕಾರ ಸಂಘಗಳ ಸಂಖ್ಯೆ
1.	ಬೆಂಗಳೂರು ನಗರ	65
2.	ಬೆಂಗಳೂರು ಗ್ರಾಮಾಂತರ	54
3.	ಚಿತ್ರದುರ್ಗ	44
4.	ಕೋಲಾರ	53
5.	ಶಿವಮೊಗ್ಗ	25
6.	ತುಮಕೂರು	52
7.	ಬೆಳಗಾಂ	97
8.	ವಿಜಾಪೂರ	20
9.	ಧಾರವಾಡ	141
10.	ಉತ್ತರಕನ್ನಡ	103
11.	ಚಿಕ್ಕಮಗಳೂರು	21
12.	ಕೊಡಗು	22
13.	ಹಾಸನ	40
14.	ಮಂಡ್ಯ	52
15.	ಮಂಗಳೂರು (ದ.ಕ.)	90

16.	ಮೈಸೂರು	93
17.	ಬಳ್ಳಾರಿ	52
18.	ಬೀದರ್	47
19.	ಗುಲ್ಬರ್ಗಾ	50
20.	ರಾಯಚೂರು	48
	ಒಟ್ಟು	1169

ಬೆಂಗಳೂರು ಜಲಮಂಡಳಿಯಲ್ಲಿ ಬೆಳಗಿನ ಸಮಯದಲ್ಲಿ ಹಣಪಾವತಿ ಕೌಂಟರ್‌ಗಳನ್ನು ತೆರೆಯುವ ಬಗ್ಗೆ

2103: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ಜಲ ಮಂಡಳಿಯಲ್ಲಿ ಹಣ ಪಾವತಿ ಮಾಡುವ ಕೌಂಟರುಗಳು ಜಯನಗರದಲ್ಲಿ ಕಛೇರಿ ವೇಳೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸಾರ್ವಜನಿಕರಿಗೆ ಹಾಗೂ ಉದ್ಯೋಗಸ್ಥ ನೌಕರರಿಗೆ ಸದರಿ ಸಮಯದಲ್ಲಿ ಹಣಪಾವತಿ ಮಾಡಲು ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ವಿದ್ಯುತ್ ಮಂಡಳಿಯಲ್ಲಿರುವಂತೆ ಬೆಳಿಗ್ಗೆ 8–30ಕ್ಕೆ ಕೌಂಟರುಗಳನ್ನು ತೆರೆಯುವುದರ ಜೊತೆಗೆ ಆಯಾ ಬಡಾವಣೆಗಳಲ್ಲಿ ಹಣ ಪಾವತಿ ಮಾಡಲು ಸಾರ್ವಜನಿಕರಿಗೆ ಅನುಕೂಲವಾಗಲು ಸಂಚಾರಿ ಘಟಕಗಳನ್ನು ಸ್ಥಾಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಬಂದಿದೆ. ಪ್ರಸ್ತುತ ಜಯನಗರ ಜಲಮಂಡಳಿ ಕಛೇರಿಯಲ್ಲಿ ಎರಡು ಹಣ ಪಾವತಿ ಮಾಡುವ ಕೌಂಟರುಗಳಿದ್ದು ಅವು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾನ 2.00 ಘಂಟೆಗಳವರೆಗೆ ಕೆಲಸ ಮಾಡುತ್ತಿದೆ. ಆದರಲ್ಲಿ ಜಲ ಮಂಡಳಿ ಕೌಂಟರ್‌ನ್ನು ಸಾರ್ವಜನಿಕರ ಅನುಕೂಲಕ್ಕಾಗಿ, ಬೆಳಿಗ್ಗೆ 8.30ಕ್ಕೆ ತೆರೆಯಲು ಅನುವು ಮಾಡಿಕೊಡಲಾಗುವುದು.

ಆ. ಆಯಾ ಬಡಾವಣೆಗೆ ಸಂಬಂಧಿಸಿದ ಸೇವಾ ಠಾಣೆಯಲ್ಲಿ ಒಂದೊಂದು ಜಲ ಮಂಡಳಿಯ ಹಣ ಪಾವತಿ ಮಾಡುವ ಕೌಂಟರುಗಳನ್ನು ತೆರೆಯಲಾಗಿದ್ದು ಅವು ಈಗ ಸಮರ್ಪಕವಾಗಿ ಕೆಲಸ ಮಾಡುತ್ತಿವೆ. ಆದುದರಿಂದ ಸಂಚಾರಿ ಕೌಂಟರುಗಳನ್ನು ಸ್ಥಾಪಿಸುವ ಅವಶ್ಯಕತೆ ಸದ್ಯದಲ್ಲಿ ಜಲಮಂಡಳಿಗೆ ಇಲ್ಲ.

ಆಗ್ರೋ ಪ್ರೋಟೀನ್ಸ್ ನೌಕರರನ್ನು ಕೃಷಿ ಇಲಾಖೆಯಲ್ಲಿ ವಿಲೀನಗೊಳಿಸುವ ಬಗ್ಗೆ

1412: ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಯಚೂರಿನಲ್ಲಿದ್ದ ಕರ್ನಾಟಕ ಆಗ್ರೋ ಪ್ರೋಟೀನ್ಸ್ ನಿಯಮಿತಿಯನ್ನು ಕರ್ನಾಟಕ ಎಣ್ಣೆ